ದಿನಾಂಕ: 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎಮ್ ಎಸ್ ಬಿ ಅರ್ಜಿದಾರ ಪರ ವಕೀಲರಿಂದಃ**

ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ದೂರಿನ ಧೃಡೀಕೃತ ನಕಲನ್ನು ನಿಪಿ-1, ಪ್ರಥಮ ವರ್ತಮಾನ ವರದಿಯನ್ನು ನಿಪಿ-2, ಸ್ಥಳ ಪಂಚನಾಮೆಯನ್ನು ನಿಪಿ-3, ಸ್ಥಳ ನಕಾಶೆಯನ್ನು ನಿಪಿ-4, ಐ.ಎಂ.ವಿ ವರದಿಯನ್ನು ನಿಪಿ-5, ಶವ ಪಂಚನಾವೆ ನಿಪಿ-6, ಪಿ ಎಮ್ ವರದಿ ನಿಪಿ-7, ಅಂತಿಮ ವರದಿಯನ್ನು ನಿಪಿ-8, ಮೃತರ ಆಧಾ ಕಾರ್ಡ ಪ್ರತಿಯನ್ನು ನಿಪಿ-9, ಮೃತರ 10 ನೇ ತರತಿಯ ಅಂಕಪಟ್ಟಿಯನ್ನು ನಿಪಿ-11, ಅರ್ಜಿದಾರರ ಆಧಾರ ಕಾರ್ಡ ಪ್ರತಿಗಳನ್ನು ನಿಪಿ-12 ರಿಂದ 15, ಮೃತನ ಮರಣ ಪ್ರಮಾಣ ಪತ್ರವನ್ನು ನಿಪಿ-16, ಪಹಣಿ ಪತ್ರಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು. ಆದ್ದರಿಂದ ಈ ಅರ್ಜಿಯನ್ನು ಮಾನ್ಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀಸವಾಲುಃ ಶ್ರೀ. ಆರ್ ಬಿ ಕೆ 1 ನೇ ಎದುರುದಾರ ಪರ ವಕೀಲರಿಂದಃ**

ಎದುರುದಾರ 1 ಹಾಗೂ ಅವರ ವಕೀಲರು ಗೈರು ಹಾಜರಿ, ಆದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

**<u>ಪಾಟೀಸವಾಲುಃ ಶ್ರೀ. ಬಿ ಎನ್ ಸಿ 2 ನೇ ಎದುರುದಾರ ಪರ ವಕೀಲರಿಂದಃ</u>**

ಎದುರುದಾರ 2 ಹಾಗೂ ಅವರ ವಕೀಲರು ಗೈರು ಹಾಜರಿ, ಸದರಿ ಎದುರುದಾರರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ. ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ